ಸಾಕ್ಷಿಯನ್ನು ದಿನಾಂಕಃ **06-10-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ. ವಿ ಆರ್ ಎಸ್., ವಕೀಲರಿಂದಃ**

ಆರೋಪಿತನು 15 ವರ್ಷಗಳಿಂದ ನನಗೆ ಪರಿಚಯ. ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ನಾನು 3 ಲಕ್ಷ ಕೊಟ್ಟಿದ್ದೆ ಮತ್ತು ಅದನ್ನು ಅವರು ಮರುಪಾವತಿಸಿದ್ದರು. ನಾನು 3 ಲಕ್ಷವನ್ನು ನಗದಾಗಿ ದಿಃ 08-01-2021 ಕ್ಕೆ ನೀಡಿದ್ದೆ. 3 ಲಕ್ಷ ಹಣವನ್ನು ಅದೇ ದಿವಸ ಬಂಗಾರವನ್ನು ಅಡವಿಟ್ಟು ನಗದನ್ನು ತೆಗೆದು ಆರೋಪಿಗೆ ನೀಡಿದ್ದೆನು. ಆರೋಪಿತನು ಒಂದು ತಿಂಗಳಲ್ಲಿ ಹಣ ವಾಪಾಸ್ಸು ನೀಡುತ್ತೇನೆ ಎಂದು ಹೇಳಿದ್ದ ಮತ್ತು ಒಂದು ತಿಂಗಳಲ್ಲಿ ಕೊಟ್ಟ. ನಾನು ಮೇಲೆ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ದಿಃ 15-07-2021 ಕ್ಕೆ ಆರೋಪಿತನು ನನ್ನ ಬಳಿ ಹಣ ಬೇಕೆಂದು 7 ಲಕ್ಷವನ್ನು ಮನೆ ರಿಪೇರಿಗೆಂದು ಕೇಳಿದ್ದನು. ನಾನು ಆದಾಯ ತೆರಿಗೆ ತುಂಬಿರಲಿಲ್ಲ. ನನ್ನ ಪಡಿತರ ಚೀಟಿ ಮುಂಚೆ ಬಿ ಪಿ ಎಲ್ ಆಗಿತ್ತು. ನಾನು ಅಡಿಕೆ ಮರ ಮತ್ತು ತೆಂಗಿನ ಮರ ಹತ್ತುವ ಕೆಲಸ ಮಾಡುತ್ತಿದ್ದೆ. ನಾನು ಅಡಿಕೆ ವ್ಯಾಪಾರ ಮಾಡುತ್ತೇನೆ. ನಾನು ಯಾವುದೇ ಲೈಸೆನ್ಸ ತೆಗೆದುಕೊಂಡಿಲ್ಲ. ನಾನು ವಾರ್ಷಿಕ ಆದಾಯವನ್ನು 1 ಲಕ್ಷ 25 ಸಾವಿರ ತೋರಿಸಿದ್ದೆನು. ಬಿ ಪಿ ಎಲ್ ಕಾರ್ಡ ರದ್ದಾಗುವ ಪೂರ್ವದಲ್ಲಿ 30 ಸಾವಿರ ತೋರಿಸಿದ್ದೆನು. ನಾನು 4 ಬ್ಯಾಂಕಿನಲ್ಲಿ ಸಾಲ ಮಾಡಿದ್ದೆನು. ಎರಡು ಬ್ಯಾಂಕಿನಲ್ಲಿ ಹಣ ಪಾವತಿ ಮಾಡದೆ ಕಟುಬಾಕಿ ಆಗಿತ್ತು. ನಾನು ಎಲ್ ಐ ಸಿ ಬಾಂಡ್ ಮೇಲೆ ಒಂದು, ಒಂದು ಲಕ್ಷದಂತೆ ಒಟ್ಟು 4 ಬ್ಯಾಂಕಿನಲ್ಲಿ ಸಾಲ ಮಾಡಿದ್ದೆ. 7 ಲಕ್ಷ ಹಣ ಹೇಗೆ ಬಂತು ಎಂದರೆ ನನ್ನ ಗೆಳೆಯನ ಬಳಿ ಕೇಳಿ ಹಾಗೂ ಬಂಗಾರವನ್ನು ಅಡವಿಟ್ಟು ಹಾಗೂ 5 ಲಕ್ಷವನ್ನು ಎಲ್ ಐ ಸಿ ಬಾಂಡಿನ ಮೇಲೆ ಸಾಲ ಪಡೆದು ಆರೋಪಿಗೆ ಕೊಟ್ಟಿದ್ದೇನೆ. ಎಲ್ ಐ ಸಿ ಗೆ ನಾನು ಎಷ್ಟು ಹಣದ ಬಾಂಡ್ ಮಾಡಿದ್ದೆ ಎಂದು ನೆನಪಿಲ್ಲ. ನಾನು ಸಾಲವನ್ನು ಅಕ್ಷಯ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಎಲ್ ಐ ಸಿ ಬಾಂಡನ್ನು ಇಟ್ಟು 5 ಲಕ್ಷ ಸಾಲ ಮಾಡಿದ್ದೆನು. ನಾನು ಯಾವ ತಾರೀಖಿಗೆ ಸಾಲಕ್ಕೆ ಅರ್ಜಿ ಹಾಕಿದ್ದಿರಿ ಎಂದರೆ ಸಾಕ್ಷಿಯು ಆಗಸ್ಟ್-2025 ರಂದು ಸಾಲಕ್ಕೆ ಅರ್ಜಿ ಹಾಕಿದ್ದೆ ಎಂದು ನುಡಿದಿರುತ್ತಾರೆ. ನಾನು ಆರೋಪಿತನಿಗೆ ದುಡ್ಡು ಕೊಟ್ಟಿದ್ದು ಇಲ್ಲ ಎಂದರೆ ಸರಿಯಲ್ಲ. ಸೆಪ್ಟೆಂಬರ್ ನಲ್ಲಿ ನನಗೆ ಸಾಲ ಮಂಜೂರಿ ಆಗಿದೆ. ನನಗೆ 4,40,000/- ಹಣ ಮಂಜೂರಾಗಿದೆ. 5 ಲಕ್ಷ ಸಾಲ ಕೈಗೆ ಸಿಕ್ಕಿದ್ದು ಇರುವುದಿಲ್ಲ. 7 ಲಕ್ಷ ಕೊಟ್ಟ ಬಗ್ಗೆ ಯಾವುದೇ ದಾಖಲೆ ಇಲ್ಲ. 7 ಲಕ್ಷ ನನಗೆ ಹೇಗೆ ಬಂತು ಎಂಬ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಗೋಲ್ಡ ಲೋನ್ ನ್ನು ನಾನು 2021 ರಲ್ಲಿ ಮಾಡಿದ್ದೆ. ಮೊದಲಬಾರಿಗೆ ಮೇ ತಿಂಗಳ 2021 ರಲ್ಲಿ 3.50 ಲಕ್ಷದ ಗೋಲ್ಡ ಲೋನ್ ಮಾಡಿದ್ದೆ. ಅದನ್ನು 2021 ರ ಮೇ ತಿಂಗಳಲ್ಲೇ ಆರೋಪಿತನಿಗೆ ಕೊಟ್ಟಿದ್ದೇನೆ. ಉಳಿದ ಮೂರುವರೆ ಲಕ್ಷವನ್ನು ಗೆಳೆಯರು ತಂದು ಕೊಟ್ಟಿದ್ದರು. ಗೆಳೆಯರ ಹೆಸರು ಗಣೇಶ ಕಣಿಯ ಅಡಿಗುಂಡಿ, ಸಾಃ ಕೂಜಿಹಳ್ಳಿ. ಮೂರುವರೆ ಲಕ್ಷವನ್ನು ನಾನು ನಗದಾಗಿ ಕೊಟ್ಟಿದ್ದೆ. ಏಳುವರೆ ಲಕ್ಷವನ್ನು ಒಂದೇ ಬಾರಿಗೆ ನಗದಾಗಿ ಕೊಟ್ಟಿದ್ದೆನು. ಆರೋಪಿತನು 7 ಲಕ್ಷವನ್ನು ಯಾವಾಗ ಕೇಳಿದ್ದ ಎಂದು ನೆನಪಿಲ್ಲ. 2021 ರಲ್ಲಿ ಕೇಳಿದ್ದ. ಯಾವ ತಿಂಗಳು ಎಂದು ನೆನಪಿಲ್ಲ. ಚೆಕ್ಕನ್ನು ನೀಡುವ 3 ತಿಂಗಳ ಮೊದಲು ಆರೋಪಿತನು ಸಾಲ ಕೇಳಿದ್ದ. ಆರೋಪಿತನು ಸಾಲ ಕೇಳಿದ ಒಂದು ವಾರದ ನಂತರ ಸಾಲ ಕೊಟ್ಟಿದ್ದೇನೆ. ಬ್ಯಾಂಕಲ್ಲಿ ಗೋಲ್ಡ ಇಟ್ಟ

ಪಿ ಡಬ್ಲುಃ 1.

ಅದೇ ದಿವಸ ಸಾಲ ಪಡೆದಿದ್ದೆನು. ಅದೇ ದಿವಸ ಗಣೇಶ ಎಂಬ ಗೆಳೆಯ ಮೂರುವರೆ ಲಕ್ಷ ಸಾಲ ಕೊಟ್ಟಿದ್ದನು. ಗಣೇಶ ಮೂರುವರೆ ಲಕ್ಷ ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ಗಣೇಶ ಎಂಬುವವನು ನನ್ನ ಖಾಲಿ ಚೆಕ್ಕನ್ನು ಭದ್ರತೆಗಾಗಿ ಪಡೆದುಕೊಂಡಿದ್ದನು. ಆತನಿಗೆ ಸ್ಟೇಟ್ ಬ್ಯಾಂಕ್ ನ ಚೆಕ್ಕನ್ನು ನೀಡಿದ್ದೆನು. ಆರೋಪಿತನಿಗೆ ಗುಂಡುಬಾಳು ದೇವಸ್ಥಾನದಲ್ಲಿ ಹಣವನ್ನು ನೀಡಿದ್ದೆನು. ಹಣವನ್ನು ಕೊಡುವಾಗ ನನ್ನ ಇಬ್ಬರು ಗೆಳೆಯರಾದ ರಮೇಶ ಮಹಾದೇವ ನಾಯ್ಕ, ಗಣೇಶ ಅಡಿಗುಂಡಿ ಇದ್ದರು. ರಮೇಶ ಮಹಾದೇವ ನಾಯ್ಕ ಇವತ್ತು ನ್ಯಾಯಾಲಯದಲ್ಲಿ ಇದ್ದಾರೆ. ಹಣ ಕೊಟ್ಟ ಬಗ್ಗೆ ಬರವಣಿಗೆ ಮಾಡಿದ್ದು ಇರುವುದಿಲ್ಲ. ನನಗೆ ಮತ್ತು ಗಣೇಶ ಇವರಿಗೆ ತುಂಬಾ ವಿಶ್ವಾಸ ಇದ್ದರೂ ನಾನು ಗಣೇಶನಿಗೆ ಖಾಲಿ ಚೆಕ್ಕನ್ನು ನೀಡಿದ್ದೇನೆ. ಆರೋಪಿತನು 3 ತಿಂಗಳಲ್ಲಿ ಹಣ ವಾಪಾಸ್ಸು ನೀಡುತ್ತೇನೆ ಎಂದು ಹೇಳಿದ್ದ. ನೀಡದೇ ಇದ್ದಾಗ 3 ತಿಂಗಳ ಬಳಿಕ ಹಣವನ್ನು ವಾಪಾಸ್ಸು ಕೇಳಿದ್ದೆನು. ದುಡ್ಡು ನೀಡಿದ ಬಳಿಕ ಆರೋಪಿಯು ಸಿಕ್ಕಿದ್ದು ಇರುವುದಿಲ್ಲ. ಆರೋಪಿತನ ಬಳಿ ದಿಃ 25-10-2021 ರಂದು ಹಣ ವಾಪಾಸ್ಸು ನೀಡಿ ಎಂದು ಕೇಳಿದ್ದೆನು. ಆರೋಪಿತನು ದೇವಸ್ಥಾನದಲ್ಲಿ ಸಿಕ್ಕಿದ್ದ. ಆರೋಪಿತನು ದಿಃ 27-10-2021 ರಂದು ಹೊನ್ನಾವರದಲ್ಲಿ ಕರ್ನಾಟಕ ಬ್ಯಾಂಕಿನ ಕೆಳಗಡೆ ಚೆಕ್ಕನ್ನು ನೀಡಿದ್ದನು. ಆರೋಪಿತನು ನನ್ನ ಮುಂದೆ ಚೆಕ್ಕಿನ ಮೊತ್ತ ಹಾಗೂ ತನ್ನ ಹೆಸರು ಎಲ್ಲಾ ಬರೆದು ಸಹಿ ಹಾಕಿ ಕೊಟ್ಟನು. ನನಗೆ ಆರೋಪಿತನ ಸಹಿ ಪರಿಚಯ ಇದೆ, ಆದರೆ ಅವನ ಅಕ್ಷರ ಗೊತ್ತಿಲ್ಲ. ಚೆಕ್ಕನ್ನು ಇಂಗ್ಲೀಷಿನಲ್ಲಿ ಬರೆದಿದ್ದಾನೆ. ಈ ಚೆಕ್ಕಿನಲ್ಲಿರುವ ಅಕ್ಷರವನ್ನು ನನ್ನ ವಕೀಲರೇ ಬರೆದಿದ್ದು ಎಂದರೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ನಾನು ಆರೋಪಿತನಿಂದ ಆರೋಪಿತನ ಸಹಿ ಇರುವ ಖಾಲಿ ಚೆಕ್ಕನ್ನು ಪಡೆದು ನನಗೆ ಬರೆಯಲು ಬರದೇ ಇದ್ದುದ್ದರಿಂದ ನನ್ನ ವಕೀಲರ ಬಳಿ ಚೆಕ್ಕನ್ನು ಬರೆಸಿದ್ದೇನೆ. ಚೆಕ್ಕಿನಲ್ಲಿರುವ ಸಹಿ ಆರೋಪಿತನದ್ದು ಇಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಕರ್ನಾಟಕ ಬ್ಯಾಂಕ್ ನ ಬಳಿ ಬರೆದ ಚೆಕ್ ಎಲ್ಲಿದೆ ಎಂದು ನೆನಪಿಲ್ಲ. ಅದನ್ನು ಬ್ಯಾಂಕಿಗೆ ಹಾಜರುಪಡಿಸಿ, ದುಡ್ಡು ತೆಗೆದುಕೊಂಡದ್ದು ಇರುವುದಿಲ್ಲ. ಆರೋಪಿತನು ನನಗೆ ಎರಡು ಚೆಕ್ ಕೊಟ್ಟಿದ್ದಾನೆ. ಆರೋಪಿತನು ಒಂದು ಚೆಕ್ಕನ್ನು ಬರೆದುಕೊಟ್ಟಿದ್ದ, ಒಂದು ಚೆಕ್ಕನ್ನು ಖಾಲಿ ಕೊಟ್ಟಿದ್ದ. ಬರೆದುಕೊಟ್ಟ ಚೆಕ್ ಎಲ್ಲಿ ಹೋಯಿತು ಎಂದು ಗೊತ್ತಿಲ್ಲ. ಆರೋಪಿತನ ಸಹಿಯನ್ನು ನಾನು ಹಾಕಿದ್ದು ಇರುವುದಿಲ್ಲ. ಆರೋಪಿತನು ತಾನು ಪಡೆದ ಸಾಲವನ್ನು ದಿಃ 12-12-2020 ರಂದು ಮರು ಪಾವತಿಸಿದ್ದರೂ ಭದ್ರತೆಗಾಗಿ ಪಡೆದ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ನೋಟೀಸಿನಲ್ಲಿ ವಕೀಲರ ಮುಖಾಂತರ ಚೆಕ್ಕನ್ನು ತುಂಬಿಸಿ, ಬ್ಯಾಂಕಿಗೆ ಹಾಜರುಪಡಿಸಿದ್ದೇನೆ ಎಂದು ಬರೆದಿದ್ದು ಇರುವುದಿಲ್ಲ. ನಾನು ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದಾಗ ಹಣವಿಲ್ಲವೆಂದು ವಾಪಾಸ್ಸು ಬಂದಿತ್ತು. ಬ್ಯಾಂಕಿನಲ್ಲಿ signature differs ಎಂದು ಮೆಮೋ ಕೊಟ್ಟಿದ್ದಾರೆ ಎಂದರೆ ಸರಿ. ಆರೋಪಿತನಿಂದ ನಾನು ಸಹಿ ಹಾಕದ ಖಾಲಿ ಚೆಕ್ಕನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಮೊದಲು ಪಡೆದ ಹಣವನ್ನು ಮರುಪಾವತಿಸಿದ ನಂತರ ಖಾಲಿ ಚೆಕ್ಕನ್ನು ವಾಪಾಸ್ಸು ಕೊಡಿ ಎಂದಾಗ ನಾನು ಅದು ಎಲ್ಲಿ ಇದೆ ಎಂದು ಗೊತ್ತಿಲ್ಲ ಎಂಬ ಕಾರಣ ನೀಡಿ ಆ ಚೆಕ್ಕನ್ನು ವಾಪಾಸ್ಸು ನೀಡದೇ ಆ ಚೆಕ್ಕಿಗೆ ಸಹಿ ಹಾಕಿ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಂದ ಅಕ್ರಮವಾಗಿ ಹಣ ವಸೂಲಿ ಮಾಡಲು ಈ ಚೆಕ್ಕನ್ನು ದುರುಪಯೋಗ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ಚೆಕ್ ನನ್ನ ಬಳಿ ಕಳೆದು ಹೋಗಿದೆ ಎಂದು ನಾನು ಪೊಲೀಸ್ ದೂರು ನೀಡಿದ್ದು ಇರುವುದಿಲ್ಲ.

ಪಿ ಡಬ್ಲುಃ 1.

ಆರೋಪಿತನು ನನಗೆ ಯಾವುದೇ ಹಣ ನೀಡಲು ಬಾಕಿ ಇಲ್ಲದೇ ಇರುವುದರಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**